ಅಸಲು ದಾವೆ ನಂ: 233/2021 ಪಿ.ಡಬ್ಲ್ಯೂ:2- ಮಹಾದೇವಪ್ಪ ಸಜ್ಜನರ

<u>ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕ:07/03/2024 ರಂದು ಪ್ರಮಾಣೀಕರಿಸಲಾಯಿತು.</u>

**<u>ಪಾಟೀ ಸವಾಲು:- ವಾದಿ ಪರ ಶ್ರೀ BAS ವಕೀಲರಿಂದ</u>**

1. ನನ್ನ ಪ್ರಮಾಣ ಪತ್ರಕ್ಕೆ ವಾದಿ ಮಾಹಿತಿ ಕೊಟ್ಟಿದ್ದಾನೆ. ಅದರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇಲ್ಲ. ಸರ್ವೇ ನಂ 448 ಒಟ್ಟು ಕ್ಷೇತ್ರ 21 ಎಕರೆ 10 ಗುಂಟೆ ಇದೆ. ಅದು ಮೂಲತ: ಶಿವಮ್ಮ ಸಜ್ಜನ ಇವರ ಜಮೀನು. ಅದನ್ನು ಹುಚ್ಚಪ್ಪ ಫಕೀರಪ್ಪ ಸಜ್ಜನ ಖರೀದಿ ಮಾಡಿದ್ದರು. ನಂತರ ಆತನ ಮೂರು ಜನ ಮಕ್ಕಳು 3 ಹಿಸ್ಸೆ ಮಾಡಿಕೊಂಡಿದ್ದಾರೆ. ಹುಚ್ಚಪ್ಪ ಫಕೀರಪ್ಪ ಸಜ್ಜನ ಇವರು 40 ವರ್ಷಗಳಿಂದ ಎಕರೆ ರೂ.2000/- ರಂತೆ ಖರೀದಿ ಮಾಡಿದ್ದರು. ಖರೀದಿ ಕಾಗದ ನೋಡಿದ್ದೇನೆ. ಖರೀದಿ ಕಾಗದ ಹುಚ್ಚಪ್ಪ ಫಕೀರಪ್ಪ ಸಜ್ಜನ ಇವರ ಹೆಸರಿನಲ್ಲಿ ಇತ್ತು. ಸದರಿ ಜಮೀನು ಯಾವತ್ತೂ ಹುಚ್ಚಪ್ಪ ಫಕೀರಪ್ಪ ಸಜ್ಜನ ಇವರ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಹುಚ್ಚಪ್ಪ ಫಕೀರಪ್ಪ ಸಜ್ಜನ ಇವರಿಗೆ ಸಂಬಂಧಿಕ ಎಂದರೆ ನಿಜ. ಸರ್ವೇ ನಂ 448 ಕ್ಕೆ ಕೆರೆ ಹೊಂಡಿಗೆ ಅಲ್ಲಿಂದ ಸರ್ವೇ ನಂ 454 ಕ್ಕೆ ಹೋಗಿ ನಂತರ ಸರ್ವೇ ನಂ 448 ಕ್ಕೆ ಹೋಗುತ್ತಾರೆ. ಊರಿಗೆ ಹತ್ತಿ ಕೆರೆ ಇದೆ ಎಂದರೆ ನಿಜ. ಆ ಕೆರೆಯಿಂದ ಎಷ್ಟು ಸರ್ವೇ ನಂಬರಗಳು ದಾಟಿ ಸರ್ವೇ ನಂ 448 ಕ್ಕೆ ಹೋಗಬೇಕು ಎನ್ನುವ ಪ್ರಶ್ನೆಗೆ ಸರ್ವೇ ನಂ.454 ರಿಂದ 14 ಸರ್ವೇ ನಂಬರಗಳು ಬರುತ್ತವೆ. ಅವುಗಳ ಸರ್ವೇ ನಂಬರ ಮತ್ತು ಕ್ಷೇತ್ರ ಮತ್ತು ಯಾರಿಗೆ ಸಂಬಂಧಿಸಿದ್ದು ಎಂದು ಹೇಳಲು ಬರುವುದಿಲ್ಲ. ಯಾವ ಯಾವ ಜಮೀನಿನ ಯಾವ ಯಾವ ಭಾಗಕ್ಕ ರಸ್ತೆ ಬರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿ ಕೆರೆ ದಂಡಿಯಿಂದ ಉತ್ತರಕ್ಕೆ ಬಂದು ದಕ್ಷಿಣಕ್ಕೆ ಹಳ್ಳಕೇರಿ ಶಿವಾನಂದ ಇವರ ಜಮೀನಿಗೆ ಬಂದು ಪೂರ್ವಕ್ಕೆ ದಿಕ್ಕಿಗೆ ಹೊರಳಿ ಭೀಗರಡ್ಡಿ ಇವರ ಹೊಲಕ್ಕೆ ಬಂದು ಪೂರ್ವ ಕ್ಕೆ ಹೊರಳಿ ಆಕಳದವರ ಜಮೀನಿಗೆ ಬಂದು, ಅಲ್ಲಿಂದ ಕುಸುಗಲ್ ಇವರ ಜಮೀನಿಗೆ ಬಂದು , ಅಲ್ಲಿಂದ ಸರ್ವೆ ನಂ 454 ಕ್ಕೆ ಬಂದು , ದಕ್ಷಿಣಕ್ಕೆ ಬಂದು , ಅಲ್ಲಿಂದ ಪೂರ್ವಕ್ಕೆ ಬಂದು , ನಂದೆಪ್ಪ ಹಕ್ಕಾಪಕ್ಕಿ (ಸವಡಿ) ಇವರ ಜಮೀನಿಗೆ ಬಂದು ಸರ್ವೆ ನಂ 448 ಕ್ಕೆ ಹೊರಳುತ್ತೇವೆ.

2. ಈ ಮೇಲೆ ಹೇಳಿದಂತೆ ನನ್ನ ಪ್ರಮಾಣ ಪತ್ರದಲ್ಲಿ ಬರೆಯಿಸಿಲ್ಲ ಎಂದರೆ ನಿಜ. ವಾದಿಯರು ಖಾಯಂವಾಗಿ ರಾಮದುರ್ಗದಲ್ಲಿ ವಾಸ ಮಾಡುತ್ತಾರೆ ಎಂದರೆ ನಿಜ. ಹುಚ್ಚಪ್ಪ ಸಹ ರಾಮದುರ್ಗದಲ್ಲಿ ವಾಸ ಮಾಡುತ್ತಾರೆ ಎಂದರೆ ನಿಜ. ಯಾವ ಕಾಲಕ್ಕೂ ಸರ್ವೇ ನಂ 448 ನ್ನು ವಾದಿಯರಾಗಲೇ ಅಥವಾ ಅವರ ತಂದೆಯವರಾಗಲೇ ಸಾಗುವಳಿ ಮಾಡಿಲ್ಲ ಎಂದರೆ ನಿಜ. ಸಾಕ್ಷಿ ನಾನೇ ಅವರ ಜಮೀನಿನ್ನು ಪಾಲಿನಂತೆ ಮಾಡುತ್ತಿದ್ದೆ ಎಂದು ಹೇಳುತ್ತಾರೆ. ಈ ಬಗ್ಗೆ ಕಾಗದ ಪತ್ರಗಳನ್ನು ನ್ಯಾಯಾಲಯದ ಮುಂದೆ

ಹಾಜರು ಮಾಡಿಲ್ಲ. 30 ವರ್ಷಗಳಿಂದ ನಾನು ಆ ಜಮೀನಲ್ಲಿ ಸಾಗುವಳಿ ಮಾಡಿದ್ದೆ ಎಂದು ತೋರಿಸಲು ನಾನು APMC ಯ ಯಾವುದೇ ಕಾಗದವನ್ನು ಹಾಜರು ಮಾಡಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ವಾದಿಯರಿಗೆ ಒಕ್ಕಲುತನದ ಸಲುವಾಗಿ ಅವರ ಜಮೀನುಗಳಿಗೆ ಪ್ರತಿವಾದಿಯ ಜಮೀನಿನ ಮೇಲೆ ಹೋಗಿ ಬಂದು ಅವಶ್ಯಕ ಅನುಭೋಗದ ಹಕ್ಕನ್ನು ಹೊಂದಿದ್ದಾರೆಂದು ಬರೆಯಿಸಿದ್ದೇನೆ. ಅವಶ್ಯಕ ಅನುಭೋಗದ ಹಕ್ಕು ಎಂಬ ಬಗ್ಗೆ ನನಗೆ ಗೊತ್ತಿದೆ. ಹಾಗೆ ಅಂದರೆ ಅಲ್ಲಿ ಹಾದಿ ಹಕ್ಕು ಎಂಬುದಾಗಿ ನನಗೆ ಗೊತ್ತಿದೆ. ಪ್ರತಿವಾದಿಯರ ಜಮೀನಿನಲ್ಲಿ ವಾದಿಯರು ಯಾವತ್ತೂ ಹಾದಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**
**ಪ್ರಧಾನ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ**
**ನ್ಯಾಯಾಧೀಶರು ರೋಣ.**